ದಿನಾಂಕ: 09.01.2025 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ವಾದಿಗಳ ಪರ ಶ್ರೀ ಜಿ ಕೆ ಎಂ ವಕೀಲರಿಂದಃ**

ನಾನು 3 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಇಂಗ್ಲಿಷ್ ಓದಲು ಬರೆಯಲು ಬರುವುದಿಲ್ಲ. ನನ್ನ ಹೆಂಡತಿ ಲಲಿತಮ್ಮರವರು 2 ನೇ ತರಗತಿ ಓದಿರಬಹುದು. ಅವರಿಗೆ ಕನ್ನಡ ಓದಲು ಬರೆಯಲು ಬರುತ್ತದೆ. ನನ್ನ ಮಗ ಸಿ ಮಂಜು ಈಗ ದ್ವಿತೀಯ ಪಿ ಯು ಸಿ ಯನ್ನು ಬೆಂಗಳೂರಿನ ಕಾಲೇಜಿನಲ್ಲಿ ಓದುತ್ತಿದ್ದಾನೆ. 2014 ರಲ್ಲಿ ನನ್ನ ಮಗ ಏನು ಓದುತ್ತಿದ್ದ ಎಂದು ನನಗೆ ಓದಲು ಬರುವುದಿಲ್ಲ. ನನ್ನ ಮಗನಿಗೆ ಸುಮಾರು 20-21 ವರ್ಷ ವಯಸ್ಸಾಗಿರಬಹುದು. 2014 ರಲ್ಲಿ ನನ್ನ ಮಗನಿಗೆ ಎಷ್ಟು ವಯಸ್ಸಾಗಿತ್ತು ಎಂದು ನನಗೆ ಹೇಳಲು ಬರುವುದಿಲ್ಲ. 2014 ರಲ್ಲಿ ನನ್ನ ಮಗ ವಯಸ್ಸಿಗೆ ಬಂದಿದ್ದ. ನನ್ನ 2 ನೇ ಮಗ ಸಿ ಮಧು ವ್ಯವಸಾಯ ಮಾಡುತ್ತಿದ್ದಾನೆ. ಅವನು ದ್ವಿತೀಯ ಪಿ ಯು ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದಾನೆ. ನನ್ನ ಇಬ್ಬರು ಮಕ್ಕಳಿಗೂ ಕನ್ನಡ ಓದಲು ಬರೆಯಲು ಬರುತ್ತದೆ. ನಾನು, ನನ್ನ ಹೆಂಡತಿ ನನ್ನ ಮಗ ಮಂಜು ಯಾವುದೇ ಪತ್ರಕ್ಕೆ ಸಹಿ ಹಾಕುವ ಮುಂಚೆ ಆ ಪತ್ರದಲ್ಲಿದಲ್ಲಿರು ವಿಚಾರವನ್ನು ಓದಿ ತಿಳಿದು, ಅರ್ಥಮಾಡಿಕೊಂಡ ನಂತರ ಸಹಿ ಮಾಡುತ್ತೇವೆ ಎಂದರೆ ನಿಜ.

ನನಗೆ ವಾದಿ ಸತ್ಯನಾರಾಯಣ ಸ್ವಾಮಿಯವರ ಪರಿಚಯವಿದೆ. ಈ ದಾವೆಯನ್ನು ವಾದಿಯು ನಮ್ಮ ವಿರುದ್ದ ಯಾವ ಕಾರಣಕ್ಕೆ ಸಲ್ಲಿಸಿದ್ದಾರೆ ಎಂದು ನಮ್ಮ ವಕೀಲರನ್ನು ಕೇಳಿ ತಿಳಿದುಕೊಂಡಿದ್ದೇನೆ. ವಾದಿ ಈ ಪ್ರಕರಣದಲ್ಲಿ ಯಾವ ದಾಖಲೆಗಳನ್ನು ಸಲ್ಲಿಸಿದ್ದಾರೆ ಎನ್ನುವ ಬಗ್ಗೆ ಕೇಳಿ ತಿಳಿದುಕೊಂಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಬಡ್ಡಿ ಕೊಡಲು ಆಗದೇ ಇದ್ದುದ್ದರಿಂದ ವಾದಿಯು ಈ ದಾವೆ ಸಲ್ಲಿಸಿದ್ದಾರೆ ಎಂದು ನುಡಿಯುತ್ತಾರೆ. ತಕರಾರು ಸಲ್ಲಿಸಲು ನನ್ನ ಹೆಂಡತಿ ನಮ್ಮ ವಕೀಲರಿಗೆ ಮಾಹಿತಿಯನ್ನು ಕೊಟ್ಟಿದ್ದಾರೆ. ನಾನು ಮಾಹಿತಿ ಕೊಟ್ಟಿಲ್ಲ. ಪ್ರತಿವಾದ ಪತ್ರದಲ್ಲಿ

ವಿಚಾರ ಬರೆದಿದ್ದಾರೆ ಎಂಬ ವಿಚಾರ ಗೊತ್ತಾ ಎಂಬ ಪ್ರಶ್ನೆಗೆ ಸಾಕ್ಷಿ ನಾವು ಬಡ್ಡಿ ಕೊಡಲು ಸಿದ್ಧವಿದ್ದರೂ ಸಹ ಅವರ ಕೇಸ್ ಹಾಕಿದ್ದಾರೆ ಎಂದು ನುಡಿಯುತ್ತಾರೆ. ಯಾವ ದಾಖಲೆ ಸಲ್ಲಿಸಿದ್ದೇವೆ ಎಂದು ನನಗೆ ಮಾಹಿತಿ ಇಲ್ಲ ನನ್ನ ಹೆಂಡತಿಗೆ ಗೊತ್ತು. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದ ಎಲ್ಲಾ ವಿಚಾರಗಳು ನನಗೆ ಗೊತ್ತಿರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಬರೆಯಲು ನನ್ನ ಹೆಂಡತಿ ಮಾಹಿತಿ ಕೊಟ್ಟಿರುತ್ತಾರೆ.

ನಿಪಿ-14 ರ 1 ನೇ ಪುಟದ ಹಿಂದಿನ ಪುಟದಲ್ಲಿರುವ ಚಿನ್ನಸ್ವಾಮಿ ಎನ್ನುವುದು ನನ್ನ ಫೋಟೋದ ನಕಲಾಗಿರುತ್ತದೆ. ನಿಪಿ-14 ರ 1 ನೇ ಪುಟದ ಹಿಂದಿನ ಪುಟದಲ್ಲಿ ನನ್ನ ಫೋಟೋ ಕೆಳಗೆ ಇರುವ ಭಾವಚಿತ್ರ ನನ್ನ ಹೆಂಡತಿಯ ಫೋಟೋದ ನಕಲಾಗಿರುತ್ತದೆ ನನ್ನ ಫೋಟೋದ ಮುಂದೆ ನಾನು ಮತ್ತು ನನ್ನ ಹೆಂಡತಿಯು ಫೋಟೋದ ಮುಂದೆ ಇರುವ ಸಹಿ ನಮ್ಮದಾಗಿರುತ್ತದೆ. ಸಾಕ್ಷಿ ಮುಂದುವರೆದು ನಮ್ಮನ್ನು ದಾಖಲೆ ಓದಲು ಬಿಟ್ಟಿಲ್ಲ ಎಂದು ನುಡಿಯುತ್ತಾರೆ. ನಿಪಿ-14 ರ 2 ನೇ ಪುಟದ ಹಿಂದಿನ ಪುಟದಲ್ಲಿರುವ ಮಂಜು ಎನ್ನುವ ಸಹಿ ಪಕ್ಕದಲ್ಲಿರುವ ಫೋಟೋ ನನ್ನ ಮಗ ಮಂಜುದಾಗಿರುತ್ತದೆ ಮತ್ತು ಸಹಿ ನನ್ನ ಮಗ ಮಂಜುದಾಗಿರುತ್ತದೆ. . ನಿಪಿ-14 ರ 2 ನೇ ಪುಟದ ಮಂಜು ಎನ್ನುವವರ ಫೋಟೋದ ಕೆಳಗೆ ಇರುವ ಫೋಟೋ ನನ್ನದಾಗಿರುತ್ತದೆ ಮತ್ತು ಅದರಲ್ಲಿ ಸಹಿ ನನ್ನ ದಾಗಿರುತ್ತದೆ.

ನಿಪಿ-14 ರ 1,2, 3 ನೇ ಪುಟಗಳಲ್ಲಿರುವ ಸಹಿಯ ನಕಲು ನನ್ನ ಸಹಿ, ನನ್ನ ಮಗನ ಮತ್ತು ನನ್ನ ಹೆಂಡತಿಯ ಸಹಿಯ ನಕಲಾಗಿರುತ್ತದೆ. ನಿಪಿ-14 ರಲ್ಲಿರುವ ಎಲ್ಲಾ ವಿಚಾರಗಳನ್ನು ಓದಿ ತಿಳಿದು ಸಹಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಓದಲು ಬಿಟ್ಟಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಅಂಗಡಿ ಹತ್ತಿರ ಓದಲು ಬಿಟ್ಟಿಲ್ಲ ಎಂದು ನುಡಿಯುತ್ತಾರೆ. ನಿಪಿ-14 ರಲ್ಲಿ ಏನು ಬರೆಯಲಾಗಿದೆ ಎಂಬ ವಿಚಾರನ್ನು ನಾನು ಓದಿ ತಿಳಿದುಕೊಂಡಿಲ್ಲ. ನಿಪಿ-14 ರಲ್ಲಿರುವ ಎಲ್ಲಾ ವಿಚಾರಗಳು ನನಗೆ ಗೊತ್ತಿದ್ದರೂ ಸಹ ನಾನು ಓದಿ ತಿಳಿದುಕೊಂಡಿಲ್ಲ ನನಗೆ ಗೊತ್ತಿಲ್ಲ

ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ-14 ರಲ್ಲಿ ನನ್ನ ವಿಳಾಸ, ನನ್ನ ಹೆಂಡತಿ ವಿಳಾಸ ಮತ್ತು ನನ್ನ ಮಗ ಮಂಜುನಾಥನ ವಿಳಾಸ ಇರುವುದು ಸರಿಯಾಗಿದೆ ಎಂದರೆ ನಿಜ. ಸರ್ವೆ ನಂಬರ್ 26/10 8 ಎಕರೆ ಜಮೀನು ನಮ್ಮ ಪಿತ್ರಾರ್ಜಿತ ಆಸ್ತಿ ಎಂದರೆ ನಿಜ. ಆ ಜಾಗದಲ್ಲಿ ತೆಂಗಿನ ಮರ ಮತ್ತು ಬೋರ್ ವೆಲ್ ಐಪಿ ಸೆಟ್ ಇದೆ ಎಂದರೆ ನಿಜ. ನಿಪಿ-14 ರಲ್ಲಿ ಚೆಕ್ಕು ಬಂದಿಗೆ ಪೂರ್ವಕ್ಕೆ ದೊರೆಸ್ವಾಮಿ ಜಮೀನು, ಪಶ್ಚಿಮಕ್ಕೆ ಭಿಮಣ್ಣನವರ ಜಮೀನು ಉತ್ತರಕ್ಕೆ ಎಂ ಚಿನ್ನಸ್ವಾಮಿಯವರ ಜಮೀನು, ದಕ್ಷಿಣಕ್ಕೆ ಹಳ್ಳ ಇದೆ ಎಂದರೆ ನಿಜ. ಆ ಆಸ್ತಿಗಳಲ್ಲಿವೂ ನಮ್ಮ ಒಟ್ಟು ಕುಟುಂಬದ ಜಮೀನುಗಳು ಎಂದರೆ ನಿಜ. ಈ ಜಮೀನುಗಳನ್ನು ಹೊರತು ಪಡಿಸಿ ನಮಗೆ ಬೇರೆ ಜಮೀನುಗಳು ಇರುವುದಿಲ್ಲ.

18.02.2014 ವಾದಿಯರ ಬಳಿ ನಾನು ಬಡ್ಡಿಗೆ ಎಂದು ರೂ.5 ಲಕ್ಷ ಸಾಲ ಪಡೆದಿರುತ್ತೇನೆ. ಆ ದಿನ ನಾನು , ನನ್ನ ಹೆಂಡತಿ ಮತ್ತು ಸತ್ಯ ನಾರಾಯಣ್ ರವರ ಸಂಬಂಧಿಕರು ಇದ್ದರು. ಸತ್ಯ ನಾರಾಯಣ್ ರವರ ಸಂಬಂಧಿಕರು ನನಗೆ ಪರಿಚಯವಿಲ್ಲ. ಸತ್ಯನಾರಾಯಣ್ ರವರ ಚಿನ್ನದ ಅಂಗಡಿ ಹತ್ತಿರ ಹಣ ಪಡೆದುಕೊಂಡಿರುತ್ತೇವೆ. ವಾದಿಯವರು ನನ್ನ ಹೆಂಡತಿ ಮೂಲಕ ಪರಿಚಯವಾಗಿರುತ್ತಾರೆ. 2014 ರಿಂದ ವಾದಿಯು ಪರಿಚಯವಿದ್ದಾರೆ. ಸಾಲ ಕಟ್ಟಲು ಹಣ ಬೇಕಿತ್ತು ಅದರ ಸಲುವಾಗಿ ವಾದಿಯಿಂದ ಹಣ ಪಡೆದಿದ್ದೆ . ಆ ದಿನ ರೂ.1 ಬಡ್ಡಿ ಗೆ ಹಣ ಪಡೆದುಕೊಂಡಿರುತ್ತೇವೆ. ಆ ಬಗ್ಗೆ ಯಾವುದೇ ಪತ್ರ ವ್ಯವಹಾರ ಆಗಿರುವುದಿಲ್ಲ 9 ತಿಂಗಳ ಒಳಗೆ ಹಣ ಹಿಂತಿರುಗಿಸುತ್ತೇವೆ ಎಂದು ನನ್ನ ಹೆಂಡತಿ ವಾದಿಗೆ ಹೇಳಿದ್ದರು. ಅದೇ ದಿನ ರೂ.5 ಲಕ್ಷವನ್ನು ವಾದಿಯಿಂದ ಪಡೆದುಕೊಂಡು ಹೋಗಿರುತ್ತೇವೆ. ಪ್ರತಿ ತಿಂಗಳು ರೂ.5,000/- ದಂತೆ 2016 ರ ವರೆಗೆ ಬಡ್ಡಿ ಕಟ್ಟಿರುತ್ತೇವೆ. ಸಾಕ್ಷಿ ರಸೀದಿ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಬಡ್ಡಿ ಕಟ್ಟಿದ ಬಗ್ಗೆ ರಶೀದಿಯನ್ನು ನಾವು ಕೇಳಿದ್ದೆವು ಆದರೆ ಅವರು ಕೊಟ್ಟಿರುವುದಿಲ್ಲ. ಒಟ್ಟು ಎಷ್ಟು ಬಡ್ಡಿ ಕಟ್ಟಿರಬಹುದು ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಲೆಕ್ಕ ಹಾಕಲು ಬರುವುದಿಲ್ಲ ಎಂದು ನುಡಿಯುತ್ತಾರೆ.

2016 ರಲ್ಲಿ ಸೆಪ್ಟಂಬರ್ ವರೆಗೆ ಹಣ ಕಟ್ಟಿರುತ್ತೇವೆ. 2016 ರ ನಂತರ ನನ್ನ ಮೈ ಬೆಂಕಿಯಿಂದ ಬೆಂದು ಹೋದ್ದರಿಂದ ನನಗೆ ಕಟ್ಟಲು ಆಗಲಿಲ್ಲ.

ಕೋಮದಿಯವರು ನನಗೆ ಬಡ್ಡಿಗೆ ಹಣ ಕೊಟ್ಟಿದ್ದರು. ಅವರು ರೂ.9 ಲಕ್ಷ ಹಣ ಕೊಟ್ಟಿದ್ದರು. ಅವರ ಬಳಿ ಎಷ್ಟು ಬಡ್ಡಿ ಮಾತನಾಡಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿ ಅದರ ಬಗ್ಗೆ ನನ್ನ ಹೆಂಡತಿಗೆ ಗೊತ್ತು ಎಂದು ನುಡಿಯುತ್ತಾರೆ. 06.09.2013 ರಲ್ಲಿ ಕೋಮದಿಯವರ ಬಳಿ ಸಾಲ ಪಡೆದುಕೊಂಡಿದ್ದೆವು ಎಂದು ನುಡಿಯುತ್ತಾರೆ. ಕೋಮದಿಯವರಿಗೆ ಎಷ್ಟು ವಾಯಿದೆಯಲ್ಲಿ ಹಣ ಕೊಡಬೇಕೆಂದು ಮಾತುಕತೆಯಾಗಿತ್ತು ಎಂಬ ಪ್ರಶ್ನೆಗೆ ಸಾಕ್ಷಿ ಅವರಿಗೆ ಹೊಲ ಕೊಡುತ್ತೇವೆ ಎಂದು ಮಾತುಕತೆಯಾಗಿದ್ದು ಅವರು ಹೊಲ ಬೇಡ ಹಣ ಕೊಡಿ ಎಂದು ಹೇಳಿದ್ದರು. ಕೋಮದಿಯವರ ಬಳಿ ಆ ಸಾಲದ ಬಾಬ್ತು ಯಾವುದೇ ಕರಾರು ಆಗಿರುವುದಿಲ್ಲ. ಆ ವ್ಯವಹಾರ ಆಗುವಾಗ ಕೋಮದಿ ಮತ್ತು ನನ್ನ ಹೆಂಡತಿ ಇದ್ದರು. ರೂ. 9 ಲಕ್ಷಕ್ಕೆ ಬಡ್ಡಿಯನ್ನು ನನ್ನ ಹೆಂಡತಿ ಕೊಡುತ್ತಿದ್ದರು ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. ಆ ಬಡ್ಡಿ ಕೊಟ್ಟ ಬಗ್ಗೆ ರಶೀದಿಯನ್ನು ಪಡೆದುಕೊಂಡಿಲ್ಲ. ಬಡ್ಡಿ ಕೊಟ್ಟ ಬಗ್ಗೆ ನಾನು ರಶೀದಿ ಕೇಳಿದ್ದಕ್ಕೆ ನನ್ನ ಹೆಂಡತಿ ನಂಬಿಕೆ ಮೇಲೆ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ.

ಕೋಮದಿಯವರ ಹಣವನ್ನು ಪಾವತಿಸಿರುತ್ತೇವೆ. ಕೋಮದಿಯವರಿಗೆ ಒಟ್ಟು ರೂ.9 ಲಕ್ಷವನ್ನು ಯಾವಾಗ ಕೊಟ್ಟಿರಿ ಎಂಬ ಪ್ರಶ್ನೆಗೆ ಸಾಕ್ಷಿ ವಾದಿಯಿಂದ ಪಡೆದುಕೊಂಡು ಒಂದು ತಿಂಗಳ ನಂತರ ಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ. ಹಣ ಕೊಡುವ ಸಮಯದಲ್ಲಿ ನನ್ನ ಹೆಂಡತಿ ಮತ್ತು ಮಗ ಇದ್ದರು. ಕೋಮದಿಯವರಿಗೆ ಬಡ್ಡಿ ಮತ್ತು ಅಸಲು ಕೊಟ್ಟ ಬಗ್ಗೆ ರಶೀದಿಯನ್ನು ಪಡೆದುಕೊಂಡಿಲ್ಲ. ಕೋಮದಿಯವರಿಗೆ ಯಾವುದೇ ರೀತಿ ಪತ್ರವನ್ನು ನಾನಾಗಲೀ, ನನ್ನಹೆಂಡತಿಯಾಗಿಲಿ ನನ್ನ ಮಗನಾಗಲೀ ಬರೆದುಕೊಟ್ಟಿಲ್ಲ ಎಂದರೆ ಸಾಕ್ಷಿ ಕೋಮದಿಯವರಿಗೆ ಜಾಗದ ಬಾಬ್ತು ಕರಾರಾಗಿದ್ದು ಅವರು ನಂತರ ಬೇಡ ಎಂದು ಹೇಳಿರುತ್ತಾರೆ ಎಂದು

ಹೇಳಿರುತ್ತಾರೆ ಆ ಕರಾರು ಯಾವ ತಿಂಗಳು, ವರ್ಷ ಆಗಿತ್ತು ಎಂದು ನನಗೆ ಗೊತ್ತಿಲ್ಲ. ಆ ಕರಾರು 1 ಎಕರೆಗೆ ಆಗಿರುತ್ತದೆ. ಆ ಕರಾರಿನಲ್ಲಿ ರೂ.10 ಲಕ್ಷಕ್ಕೆ ಮಾತಾಗಿತ್ತು. ಅದರಲ್ಲಿ ನಾವು ರೂ.9 ಲಕ್ಷ ಹಣ ಪಡೆದಿದ್ದೆವು. ಸದರಿ ಕರಾರಿನಲ್ಲಿ ಎಷ್ಟು ವಾಯಿದೆ ಬರೆದಿದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ನನ್ನ ಹೆಂಡತಿಗೆ ಗೊತ್ತು ಎಂದು ನುಡಿಯುತ್ತಾರೆ. ಆ ಕರಾರು ನೊಂದಣಿಯಾಗಿರುವುದಿಲ್ಲ. ಆ ಕರಾರಿಗೆ ನಾನು, ನನ್ನ ಹೆಂಡತಿ, ನನ್ನ ಮಗ ಮಂಜುನಾಥ ಸಹಿ ಮಾಡಿರುತ್ತೇವೆ. ಆ ಪತ್ರಕ್ಕೆ ಸಾಕ್ಷಿದಾರರಾಗಿ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆ ದಾಖಲೆಗೆ ಪ್ರಭುಶಂಕರ್ ವಕೀಲರ ಕಛೇರಿಯಲ್ಲಿ ಸಹಿ ಮಾಡಿರುತ್ತೇವೆ. ಆ ಪತ್ರ ರದ್ದಾಗಿದೆಯೋ ಇಲ್ಲವೋ ಎಂದು ನನಗೆ ಗೊತ್ತಿರುವುದಿಲ್ಲ. ಆ ಪತ್ರವನ್ನು ರದ್ದು ಗೊಳಿಸಲು ನೀವಾಗಲೀ ನಿಮ್ಮ ಹೆಂಡತಿಯಾಗಲೀ ಕೇಳಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ಕರಾರು ಪತ್ರದ ಆಧಾರದ ಮೇಲೆ ಕ್ರಯ ಪತ್ರ ಬರೆದುಕೊಡಲು ಕೋಮುದಿಯವರು ನಮಗೆ ನೋಟೀಸ್ ನೀಡಿರುವುದಿಲ್ಲ. ನಾನು ವಾದಿಯಿಂದ ರೂ.5 ಲಕ್ಷ ಪಡೆದುಕೊಂಡು ಸುಳ್ಳುಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2016 ರ ವರೆಗೆ ಬಡ್ಡಿ ಕೊಟ್ಟಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕೋಮುದಿ ಬಳಿ ರೂ.9 ಲಕ್ಷ ಸಾಲ ಪಡೆದುಕೊಂಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕೋಮುದಿಯವರಿಗೆ ಅಸಲು ಮತ್ತು ಬಡ್ಡಿ ಕೊಟ್ಟಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ಎಕರೆ ಜಮೀನನ್ನು ಕೋಮುದಿಯವರಿಗೆ ರೂ.10 ಲಕ್ಷಕ್ಕೆ ಕರಾರು ಬರೆದುಕೊಟ್ಟಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕೋಮುದಿಯವರು ಹಿರಿಯೂರು ಟೌನ್ ಹರಿಶ್ಚಂದ್ರಘಾಟ್ ನಲ್ಲಿ ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ಕೋಮುದಿಯವರನ್ನು ಸಾಕ್ಷಿ ವಿಚಾರಣೆ ಮಾಡಿಸುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿ ಅವರ ಹಣವನ್ನು ವಾಪಸ್ಸು ಮಾಡಿರುತ್ತೇವೆ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು